**ಎಸ್ ಸಿ ನಂ. 5050/2023**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ:** 1

**ಪಿ ಡಬ್ಲೂ:** 1

| | |
|---|---|
| ಸಾಕ್ಷಿಯ ಹೆಸರು - | ಸುಮಂಗಲಮ್ಮ |
| ಗಂಡನ ಹೆಸರು - | ಸಣ್ಣ ಹನುಮಂತ |
| ವಯಸ್ಸು - | 56 ವರ್ಷ |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಕೋಗಲಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ:** 29-05-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಪಿ. ಪಿ. ಅವರಿಂದ**

ಆರೋಪಿತರು ನನಗೆ ಗೊತ್ತು. 5 ವರ್ಷಗಳ ಹಿಂದೆ ಆಸ್ತಿ ವಿಚಾರವಾಗಿ ನಮ್ಮ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನಲ್ಲಿ ಜಗಳವಾಗಿತ್ತು. ಆರೋಪಿತರು ಯಾವತ್ತೂ ನನ್ನನ್ನ ಆಗಲಿ, ಚಾಸಾ -4 ರವರನ್ನಾಗಲಿ ಹಲ್ಲೆ ಮಾಡಿ, ಬಟ್ಟೆ ಹರಿದು, ಮಾನಕ್ಕೆ ಚ್ಯುತಿ ಬರುವಂತೆ ನಡೆದುಕೊಂಡಿಲ್ಲ. ಪೋಲಿಸರಿಗೆ ಯಾವುದೇ ದೂರು ನೀಡಿಲ್ಲ. ಪೋಲಿಸರು ಖಾಲಿ ಹಾಳೆಗಳಿಗೆ ನಮ್ಮ ಸಹಿಗಳನ್ನು ಪಡೆದುಕೊಂಡು ದೂರು ಹಾಗೂ ಪ್ರತಿ ದೂರುಗಳನ್ನು ದಾಖಲಿಸಿದ್ದರು. ಅವುಗಳನ್ನು ಈಗ ನೋಡುತ್ತಿದ್ದು ನಿಪಿ: 1 ರಿಂದ 3 ಎಂದು ಗುರುತಿಸಲಾಯಿತು. ಸಹಿಗಳನ್ನು ನಿಪಿ: 1 (ಎ) ದಿಂದ 3 (ಎ). ನಿಪಿ: 4 ಮತ್ತು 5 ರಂತೆ ಪೋಟೋಗಳನ್ನು ತೆಗೆದು ನನ್ನಿಂದ ಮು ಮಾ 1 ಸೀರೆಯನ್ನು ತೆಗೆದುಕೊಂಡು ಹೋಗಿದ್ದಾರೆ. ಪೋಲಿಸರು ನ್ಯಾಯಾಧೀಶರ ಮುಂದೆ ಇದೇ ರೀತಿ ಹೇಳುವಂತೆ ನನ್ನಿಂದ ನಿಪಿ: 6 ರಂತೆ ಹೇಳಿಕೆಗಳನ್ನು ಕೊಡಿಸಿದ್ದರು. ಅಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಎಸ್ ಸಿ ನಂ. 5050/2023**

**ಪಾಟೀ ಸವಾಲುಃ ಮಾನ್ಯ ಪಿ ಪಿ ಅವರಿಂದ**

ದಿಃ 24-08-2020 ರಂದು ಬೆಳಿಗ್ಗೆ 09.30 ಗಂಟೆ ಸುಮಾರಿಗೆ ಆಸ್ತಿಯನ್ನು ಅಳತೆ ಮಾಡುವ ವಿಚಾರಕ್ಕೆ ಆರೋಪಿತರು ನನ್ನೊಂದಿಗೆ ಜಗಳ ಮಾಡಿ, ನನಗೆ ಹಾಗೂ ಚಾಸಾ -4 ರವರಿಗೆ ಕೈಯಿಂದ ಹಲ್ಲೆ ಮಾಡಿ, ನನ್ನ ಸೀರೆ ಎಳೆದು ಅಪಮಾನ ಮಾಡಿದ ಬಗ್ಗೆ ಪೋಲಿಸರಲ್ಲಿ ನಿಪಿಃ 1 ರಂತೆ ದೂರು ನೀಡಿ, ನಿಪಿಃ 2 ಮಹಜರು ಕಾಲದಲ್ಲಿ ಮು ಮಾ 1 ಸೀರೆ ಅಮಾನತ್ತಿಗೆ ಸಾಕ್ಷಿಯಾಗಿ, ನ್ಯಾಯಾಧೀಶರ ಮುಂದೆ ನಿಪಿಃ 6 ರಂತೆ 164 ಹೇಳಿಕೆ ನೀಡಿ, ಪೋಲಿಸರ ಮುಂದೆ ನಾನು............. ನೀಡಿರುತ್ತೇನೆ ಎಂದು ನಿಪಿಃ 7 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ವಿ ಬಿ ., ವಕೀಲರಿಂದಃ ಇಲ್ಲಾ.**

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.